ಆ) ಮತ್ಸ್ಯಾಶ್ರಯ ಯೋಜನೆಯ ಪ್ರಕಾರ ಹುಡ್ಕೋ ಸಂಸ್ಥೆಯಿಂದ ಸಾಲ ಪಡೆದು, ನಿರ್ಮಾಣ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಬೇಕಾಗಿರುತ್ತದೆ. ಹುಡ್ಕೋ ಸಂಸ್ಥೆಯಿಂದ ಸಾಲ ಬಿಡುಗಡೆಯಾಗದ ಪ್ರಯುಕ್ತ ಮನೆಗಳ ನಿರ್ಮಾಣಕ್ಕೆ ಹಣ ಬಿಡುಗಡೆಯಾಗಿರುವುದಿಲ್ಲ.

ಇ) ಹೌದು.

ಈ) ಹುಡ್ಕೋ ಸಂಸ್ಥೆಯಿಂದ ಸಾಲ ಬಿಡುಗಡೆಯಾದ ಕೂಡಲೇ ಹಣ ಬಿಡುಗಡೆ ಮಾಡಲಾಗುವುದು.

ಶ್ರೀರಂಗಪಟ್ಟಣ ತಾಲ್ಲೂಕಿನ ಪಶುಚಿಕಿತ್ಸಾ ಕೇಂದ್ರಗಳು

1602 (2056) ಶ್ರೀಮತಿ ಪಾರ್ವತಮ್ಮ ಶ್ರೀಕಂಠಯ್ಯ (ಶ್ರೀರಂಗಪಟ್ಟಣ): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶ್ರೀರಂಗಪಟ್ಟಣ ತಾಲ್ಲೂಕಿನಾದ್ಯಂತ ಕಾರ್ಯನಿರ್ವಹಿಸುತ್ತಿರುವ ಪಶುಚಿಕಿತ್ಸಾ ಕೇಂದ್ರಗಳೆಷ್ಟು; ಈ ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶು ವೈದ್ಯರುಗಳ ಕೊರತೆ ಇದೆಯೇ;

ಆ) ಹಾಗಿದ್ದಲ್ಲಿ, ಅವುಗಳನ್ನು ತುಂಬುವ ಬಗ್ಗೆ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ 7 ಪಶು ಚಿಕಿತ್ಸಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 2 ಪಶು ಚಿಕಿತ್ಸಾ ಕೇಂದ್ರಗಳಲ್ಲಿ ಪಶುವೈದ್ಯರ ಕೊರತೆ ಇದೆ.

ಆ) 250 ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಸದ್ಯದಲ್ಲಿ ತುಂಬುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

ಹಾಸನ ಜಿಲ್ಲೆಯ ಪಶು ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವುದು

1604 (1397) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು): ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳು ಹಾಗೂ ಪಶುಪರೀಕ್ಷಾ ಕೇಂದ್ರಗಳು ಇವೆ;

ಆ) ಕಳೆದ ಸಾಲಿನಲ್ಲಿ ಎಷ್ಟು ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ; ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು	-	94
ಕೃತಕ ಗರ್ಭಧಾರಣಾ ಕೇಂದ್ರಗಳು	-	09
ಪಶು ಆಸ್ಪತ್ರೆಗಳು	-	12
ಪಶು ಚಿಕಿತ್ಸಾಲಯ	-	61
ಸಂಚಾರಿ ಪಶು ಚಿಕಿತ್ಸಾಲಯ	-	08

ಆ) ಕಳೆದ ಸಾಲಿನಲ್ಲಿ 7 ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳನ್ನು ಪಶು ಚಿಕಿತ್ಸಾಲಯಗಳನ್ನಾಗಿ ಮೇಲ್ದರ್ಜೆ ಗೇರಿಸಲಾಗಿದೆ.

ಹೊಸದಾಗಿ ಯಾವುದೇ ಮಂಜೂರಾಗಿರುವುದಿಲ್ಲ.

ಮೇಲ್ದರ್ಜೆಗೇರಿಸಿದ ಕೇಂದ್ರಗಳ ತಾಲ್ಲೂಕು ವಿವರ ಈ ಕೆಳಕಂಡಂತೆ ಇದೆ.

ಹಾಸನ	-	01
ಹೊಳೆನರಸೀಪುರ	-	01
ಅರಸೀಕೆರೆ	-	01
ಅರಕಲಗೂಡು	-	03
ಚೆನ್ನರಾಯಪಟ್ಟಣ	-	01
ಒಟ್ಟು	-	07

ರಾಜ್ಯದ ಮೀನುಗಾರಿಕೆ ಸೌಲಭ್ಯಗಳು

1605 (2057) ಶ್ರೀ ಪುಟ್ಟರಂಗನಾಥ ಎಸ್.ಹೆಚ್. (ಬೇಲೂರು): ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೀನುಗಾರಿಕೆ ಇಲಾಖೆಯಲ್ಲಿ ಹಾಸನ ಜಿಲ್ಲೆಯಲ್ಲಿ ಎಷ್ಟು ಅರ್ಹ ಫಲಾನುಭವಿಗಳನ್ನು ಗುರುತಿಸಿ ಮನೆ ಮಂಜೂರು ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ಸಾಲಿನಲ್ಲಿ ಎಷ್ಟು ಮನೆ ಮಂಜೂರು ಮಾಡುವ ಗುರಿ ಹೊಂದಲಾಗಿದೆ?

ಇ) ಸೈಕಲ್, ಬಲೆ ಇತರೆ ಸಾಮಗ್ರಿಗಳನ್ನು ಎಷ್ಟು ಜನಕ್ಕೆ ಒದಗಿಸಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು):

ಅ) ಇಲ್ಲಿಯವರಗೆ ಹಾಸನ ಜಿಲ್ಲೆಯಲ್ಲಿ 510 ಫಲಾನುಭವಿಗಳನ್ನು ಗುರುತಿಸಿ ಮನೆ ಮಂಜೂರು ಮಾಡಲಾಗಿದೆ (ತಾಲ್ಲೂಕುವಾರು ವಿವರ ಅನುಬಂಧದಲ್ಲಿ I ನೀಡಲಾಗಿದೆ)

ಆ) 2002-2003ನೇ ಸಾಲಿನಲ್ಲಿ 85 ಮನೆಗಳನ್ನು ಮಂಜೂರು ಮಾಡಲಾಗಿದೆ.

ಇ) 1999-2000 ರಿಂದ 2002-2003 ರವರಗೆ ಮೀನುಗಾರಿಕೆ ಮೀನು ಮಾರಾಟ ಸಲಕರಣೆ ಖರೀದಿಸಲು ಸಹಾಯಧನ ಯೋಜನೆಯಡಿ ಒಟ್ಟು 17 ಜನರಿಗೆ ಸೈಕಲ್ ಮತ್ತು ಸಲಕರಣೆ ಒದಗಿಸಲಾಗಿದೆ. (ತಾಲ್ಲೂಕುವಾರು ವಿವರ ಅನುಬಂಧ II ರಲ್ಲಿ ಒದಗಿಸಲಾಗಿದೆ). ಇದಲ್ಲದೆ 1999-2000 ರಿಂದ 2001-2002 ರವರೆಗೆ ವಿಶೇಷ ಘಟಕ ಯೋಜನೆಯಡಿ ಒಟ್ಟು 58 ಜನರಿಗೆ ಸೈಕಲ್, ಬಲೆ ಮತ್ತು ಇತರೆ ಸಾಮಗ್ರಿಗಳನ್ನು ನೀಡಿದೆ. (ತಾಲ್ಲೂಕುವಾರು ವಿವರ ಅನುಬಂಧIII ರಲ್ಲಿ ನೀಡಲಾಗಿದೆ.

ಕರ್ನಾಟಕ ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 2057ಕ್ಕೆ

ಅನುಬಂಧ-1

ಹಾಸವ ಜಿಲ್ಲೆಯಲ್ಲಿನ ಮೀನುಗಾರರಿಗೆ ಮಂಜೂರು ಮಾಡಲಾದ ಮನೆಗಳ ತಾಲ್ಲೂಕುವಾರು ವಿವರ

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಮಂಜೂರಾದ ಮನೆಗಳ ಸಂಖ್ಯೆ
1)	ಹಾಸನ	1) ಹೊಳೆನರಸೀಪುರ	191
		2) ಅರಸೀಕೆರೆ	105
		3) ಅರಕಲಗೂಡು	83